**2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯ, ಮಾಲೂರು.**

**ಸಿ.ಸಿ. ಸಂಖ್ಯೆ: 882/2019**

ಫಿರ್ಯಾದುದಾರರು : ಅಬಕಾರಿ ನಿರೀಕ್ಷಕರು,
ಮಾಲೂರು ವಲಯ, ಮಾಲೂರು.

ವಿರುದ್ಧ

ಆಪಾದಿತರು : ಸಂಪತ್,
ಬಿನ್. ಲೇಟ್ ಕೃಷ್ಣಪ್ಪ,
ವಾಸಃ- ದೊಡ್ಡನಾಯಕನಹಳ್ಳಿ ಗ್ರಾಮ,
ನೂಟವೆ ಗ್ರಾಮ ಪಂಚಾಯ್ತಿ,
ಮಾಲೂರು ತಾಲ್ಲೂಕು.

# ದೋಷಾರೋಪಣೆ

**ಶ್ರೀಮತಿ. ಪುಷ್ಪಲತಾ.ಕೆ,** ಬಿ.ಎ,(ಲಾ) ಎಲ್.ಎಲ್.ಬಿ, 2ನೇ ಅಪರ ಸಿವಿಲ್ ನ್ಯಾಯಾಧೀಶರು, ಮಾಲೂರು ಆದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪ ಮಾಡಿರುತ್ತೇನೆ.

ದಿನಾಂಕಃ 31-01-2019 ರಂದು ರಾತ್ರಿ ಸುಮಾರು 7-45 ಗಂಟೆ ಸಮಯದಲ್ಲಿ ಅಬಕಾರಿ ನಿರೀಕ್ಷಕರು ಹಾಗೂ ಅವರು ಸಿಬ್ಬಂದಿ ಮಾಲೂರು ವಲಯ ವ್ಯಾಪ್ತಿಯಲ್ಲಿ ಗಸ್ತು ನಡೆಸುತ್ತಿದ್ದಾಗ ಬಂದ ಖಚಿತ ಮಾಹಿತಿಯ ಮೇರೆಗೆ ನೂಟವೆ ಗ್ರಾಮ ಪಂಚಾಯ್ತಿಗೆ ಸೇರಿದ ದೊಡ್ಡನಾಯಕನಹಳ್ಳಿ ಗ್ರಾಮದಲ್ಲಿ ಆರೋಪಿತರಾದ ನಿಮ್ಮ ಮನೆಯಲ್ಲಿ ಶೋಧ ಕಾರ್ಯ ನಡೆಸಿದಾಗ, ಆರೋಪಿತರಾದ ನೀವು ತ್ರಿಏಸಸ್ ವಿಸ್ಕಿಯ 180 ಮಿಲಿಯ 06 ಮದ್ಯದ ಟೆಟ್ರ್ಯಾ ಪ್ಯಾಕೇಟ್‌ಗಳು ಮತ್ತು ತ್ರಿಏಸಸ್ ವಿಸ್ಕಿಯ 90 ಮಿಲಿಯ 36 ಮದ್ಯದ ಟೆಟ್ರಾ ಪ್ಯಾಕೇಟ್‌ಗಳು, ಒಟ್ಟು 4.320 ಲೀಟರ್‌ನಷ್ಟು ಮದ್ಯವನ್ನು ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೇ ಸಂಗ್ರಹಣೆ ಮಾಡಿಟ್ಟು ಕರ್ನಾಟಕ ಅಬಕಾರಿ ಕಾಯ್ದೆ ಕಲಂ. 14 ಮತ್ತು 15 ಮತ್ತು ಕಲಂ.32(1) ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ದಿನಾಂಕಃ 10.03.2020
ಸ್ಥಳಃ ಮಾಲೂರು

**(ಪುಷ್ಪಲತಾ.ಕೆ)**
2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಮಾಲೂರು.